ಮಾಡಿ ಕೊಟ್ಟಿದ್ರು. ಹದಿನೈದೇ ದಿನದಲ್ಲಿ ಅವ ಆಕ್ಸಿಡೆಂಟಿನಲ್ಲಿ ತೀರಿಕೊಂಡ. ಹೀಗಾಗಿ ವಸಂತಿ ತವರುಮನೆಯಲ್ಲೇ ಉಳಿದಳು. ಮಗಳಿಗೆ ಬೇಜಾರು ಆಗಬಾರದು ಅಂತ ಅವಳು ಹೇಳಿದಾಗ ಎಲ್ಲ ಆಟಕ್ಕೆ ಕರ್ಕೊಂಡು ಹೋಗ್ತಿದ್ರು.

ಒಂದು ಸರ್ತಿ ಹಾಗೆ ಆಟಕ್ಕೆ ಹೋಗಿದ್ದಾಗ ಬಭ್ರುವಾಹನ ಕಾಳಗದಲ್ಲಿ ಚಿತ್ರಾಂಗದೆ ಮಾಡಿದ್ದ ನಾರಾಯಣನ ವೇಷವನ್ನು ಕಣ್ಣು ಬಾಯಿ ಬಿಟ್ಟುಕೊಂಡು ನೋಡಿದಳು. ತನ್ನ ಊರಿಗೆ ಅರ್ಜುನ ಸೈನ್ಯ ಸಮೇತ ಬಂದಿದ್ದಾನೆ ಅಂತ ಗೊತ್ತಾದಾಗ ಅವಳು 'ಅಹುದೇ ಎನ್ನಯ ರಮಣ' ಅಂತ ಕೇಳಿಕೊಂಡು ಸಂತೋಷದಿಂದ ಕುಣಿಯುವ ಪದ್ಯಕ್ಕೆ ಅವ ಹದಿನೈದು ನಿಮಿಷ ಬಗೆಬಗೆಯಲ್ಲಿ ಕುಣಿದಿದ್ದ. ಉರೂಟು ಉರೂಟು ಕೆಂಪು ಟೊಮ್ಯಾಟೊದ ಹಾಗೆ ಇದ್ದ ಅವನ ವೇಷವೇ ವೇಷ. ಅಷ್ಟು ಚೆಂದ. ಹೆಣ್ಣು ಇದ್ದರೆ ಹೀಗೆ ಇರಬೇಕು ಅಂತ ಅವಳಿಗೆ ಅನಿಸಿತು. ಅವ ಕುಣಿತ ಮುಗಿಸಿ ಚೌಕಿಗೆ ಹೋದಾಗ ಇವಳು ಸಾ ಒಳಗೆ ಹೋದಳು. 'ನಿಮ್ಮ ವೇಷ ಭಾರೀ ಲಾಯ್ಕಾಗಿತ್ತು. ಪ್ರಸಂಗದಲ್ಲಿ ಭಾರೀ ರೈಸಿದ್ರಿ ನೀವು' ಅಂದಳು. ಅವ ಬಾಯಲ್ಲಿ ಬೀಡಿ ಕಚ್ಚಿಕೊಂಡು ಪುಸು ಪುಸು ಅಂತ ಹೊಗೆ ಬಿಡ್ತಾ ಇದ್ದವ ಒಂದು ಮಾತೂ ಆಡಲಿಲ್ಲ. ಮುಖದಲ್ಲಿ ನಗೆ ಸಾ ತೋರಿಸ್ಲಿಲ್ಲ. ವೇಷ ಎಲ್ಲ ಕಳಚಿ ಬಟ್ಟೆ ಹಾಕಿಕೊಳ್ಳುವಾಗ, 'ನಿಂದು ಯಾವ ಊರು? ಎಂತ ಹೆಸರು?' ಅಂತೆಲ್ಲ ಕೇಳಿದ. ಅವಳು ಸ್ವಲ್ಪ ಮಾತಿನಲ್ಲಿ ಮುಂದೆ. ಪಟ ಪಟ ಪಟಾಂತ ಅವ ಕೇಳಿದ್ದಕ್ಕಿಂತ ಹೆಚ್ಚು ಮಾತಾಡಿದಳು. ಎಲ್ಲ ಹೇಳಿದಳು. 'ನಂದು ಈ ತಿಂಗಳು, ಬರುವ ತಿಂಗಳು ಈ ಊರಿನ ಸುತ್ತಮುತ್ತ ಸುಮಾರು ಕಡೆ ವೇಷ ಉಂಟು. ಬಾ ನೋಡ್ಲಿಕ್ಕೆ' ಅಂತ ಹೇಳಿದ. ಹಾಗೆ ಹೇಳುವಾಗ ಸಾ ಅವನ ಮುಖದಲ್ಲಿ ನಗೆಯ ಪಸೆ ಇಲ್ಲ. ವಸಂತಿಗೆ ವಿಚಿತ್ರ ಅನಿಸಿತು. ಸ್ಟೇಜಿನಲ್ಲಿ ವೇಷ ಮಾಡುವಾಗ ನಗೆಯೇನು? ಲಾಸ್ಯವೇನು? ಈಚೆ ಬಂದರೆ ಗಂಟುಗುಡುಪನ ಹಾಗೆ ಮುಖ ಮಾಡ್ತಾರೆ! ಹೊಗಳಿದ್ರೆ ಸಾ ನೆಗ್ಯಾಡುದಿಲ್ಲ! ಇರ್ಲಿ ಆಟ ನೋಡ್ಲಿಕ್ಕೆ ಆದ್ರೂ ಬಾ ಅಂತ ಅಂದ್ರಲ್ಲ ಅಷ್ಟೇ ಸಾಕು ಅಂತ ಅನಿಸಿತು.

ಅವತ್ತಿನಿಂದ ನಾರಾಯಣನ ವೇಷ ಎಲ್ಲೆಲ್ಲಿ ಇತ್ತಾ ಅಲ್ಲೆಲ್ಲ ಹೋಗಿ ನೋಡುದು, ಅವನನ್ನು ಮಾತಾಡಿಸುದು ಎಲ್ಲ ಮಾಡ್ತಿದ್ದಳು. ಗೋವಿಂದ ಭಟ್ರಿಗೆ ಎಲ್ಲ ಸಲವೂ ಅವಳೊಟ್ಟಿಗೆ ಹೋಗಿ ಆಟ ನೋಡ್ಲಿಕ್ಕೆ ಆಗ್ತಿರಲಿಲ್ಲ. ಕೆಲವು ಸರ್ತಿ ಸೇಸಿಯನ್ನು ಒಟ್ಟು ಹಾಕಿ ಕಳಿಸ್ತಿದ್ರು.

ಒಮ್ಮೆ ಹಾಗೆ ಹೋಗಿದ್ದಾಗ ಅವ ವೇಷ ಕಳಚಿ ಇರುವುದಕ್ಕೂ ಅವಳು ಚೌಕಿಗೆ ಬರೂದಕ್ಕೂ ಸಮಾ ಆಯ್ತು. ಅವಳು ಮಾತಾಡ್ತಾ ಇದ್ದ ಹಾಗೆ ಅವ ಅವಳನ್ನು ಅರಂಟಿ ಹಿಡ್ಕೊಂಡ. ಬೆಳಗಿನ ಜಾವ ಬೇರೆ. ಹಿತವಾದ ಚಳಿ. ಅವಳು ಸಾ ಪ್ರತಿಭಟಿಸಲಿಲ್ಲ. ಹಾಗೆ ಅವಳನ್ನು ಕತ್ತಲಲ್ಲಿ ಬೈಲಿನ ಮರೆಯೊಂದಕ್ಕೆ ಕರೆದುಕೊಂಡು ಹೋಗಿದ್ದ. ಒಂದು ಕನಸೋ ಎಂಬಂತೆ ಎಲ್ಲವೂ ನಡೆದುಹೋಗಿತ್ತು.

ಮೂರು ತಿಂಗಳಾದ ಮೇಲೆ ಅದರ ಪರಿಣಾಮ ಗೊತ್ತಾಯಿತು. ಗಂಡ ಸತ್ತು ವರ್ಷದ ನಂತರ ಮಗಳು ಗರ್ಭಿಣಿ ಆಗಿದ್ದಾಳೆ ಅಂತ ಗೊತ್ತಾಗಿ ಗೋವಿಂದ ಭಟ್ರ ಹೃದಯ ಒಡೆದುಹೋಯಿತು. ನಾರಾಯಣನಿಂದ ಹೀಗಾಯಿತು ಅಂತ ಗೊತ್ತಾಗಿ ತಲೆಕೆಟ್ಟು ಹೋಯಿತು. ಅವನನ್ನು ಹುಡುಕಿಕೊಂಡು ಊರೂರು ಅಲೆದು ಸಾಕಾಯ್ತು. ಕಡೆಗೆ ಒಂದು ಊರಲ್ಲಿ ಸಿಕ್ಕಿದ. ವಿಷಯ ತಿಳಿಸಿ, 'ನಿನ್ನ ಕಾಲುಹಿಡೀತೇನೆ ಅವಳನ್ನು ಮದುವೆಯಾಗು' ಅಂತ ಅಂಗಲಾಚಿದರು. ಅದಕ್ಕೆ ಅವ 'ನಂಗೆ ಮದುವೆಯಾಗಿ ಇಬ್ಬರು ಮಕ್ಕಳಿದ್ದಾರೆ. ಇವಳು ಚೆಂದ ಕಂಡ್ಳು, ಗಮ್ಮತ್ ಮಾಡಿದೆ. ಅಷ್ಟಕ್ಕೇ ಮದುವೆ ಆಗು ಅಂದರೆ ಹೇಗೆ? ನಂಗೆ ಜಲಜ, ನಾಗಕ್ಕ, ಗುಲಾಬಿ ಅಂತ ತುಂಬ ಜನ ಹೀಗಿನವರು ಇದ್ದಾರೆ. ನಾನು ಅವರನ್ನೆಲ್ಲ ಮದುವೆ ಆದ್ರೆ ನನ್ನ ಮನೆ ಸಾಕಾಗ್ಲಿಕ್ಕಿಲ್ಲ ಗೊತ್ತುಂಟಾ? ಇಷ್ಟಕ್ಕೂ ನಿಮ್ಮ ಮಗಳ ಈ ಸ್ಥಿತಿಗೆ ನಾನು ಒಬ್ಬನೇ ಕಾರಣ ಅಲ್ಲ. ಅವಳಿಗೆ ಸಾ ಅಕ್ಕಲ್ ಇರ್ಬೇಕಿತ್ತು' ಅಂತ ಖಾರವಾಗಿ ಹೇಳಿದ. ಗೋವಿಂದ ಭಟ್ರಿಗೆ ಮುಸುಡಿಗೆ ನಾಕು ಬಿಡುವಷ್ಟು ಗರ್ವ ಬಂತು. ಆದ್ರೆ ಉಪಾಯ ಇಲ್ಲ. ಸುಮ್ಮನಾದರು. 'ಬೇಡ ಅಂತಾದ್ರೆ ಗರ್ಭ ತೆಗೆಸ್ಲಿಕ್ಕೆ ಹೇಳಿ. ಇಲ್ಲಾಂತಾದ್ರೆ ಹೆತ್ತ ನಂತರ ತಿಂಗಳಿಗೆ ಅಷ್ಟೋ ಇಷ್ಟೋ ಕೊಡ್ತೇನೆ. ಬದುಕಿಕೊಳ್ಳಲಿ' ಅಂದ ಎಲ್ಲಿಯೋ ನೋಡ್ತಾ. ಮಾತುಕತೆಗೆ ಅಂತ ಕರ್ಕೊಂಡು ಬಂದಿದ್ದ ಊರಿನ ಹಿರಿಯರ ಮುಂದೆ ಮರ್ಯಾದಿ ಹೋದದ್ದರಿಂದ ಬೇಜಾರಾಗಿದ್ದ ಭಟ್ರು ಅವತ್ತೇ ರಾತ್ರಿ ದೇವಸ್ಥಾನದ ಕೆರೆಗೆ ಹಾರಿ ಜೀವ ತೆಕ್ಕೊಂಡಿದ್ದರು.

ಅಲ್ಲಿಂದಾಚೆಗೆ ವಸಂತಿಯ ಬಾಳು ನಾಯಿ ಬಾಳಾಗಿತ್ತು. ಊರವರು ನೆಂಟರು ಇಷ್ಟರು ಎಲ್ರೂ ಸಾ ಅವಳನ್ನು ಛೀ ಥೂ ಎನ್ನುವವರೇ. ಕೆಲವರು ಪಾಪದ ಪಿಂಡವನ್ನು ತೆಗೆಸಿಕೋ ಅಂದ್ರು. ಮತ್ತೆ ಕೆಲವರು ಇಟ್ಟುಕೋ, ಆದ್ರೆ ಊರು ಬಿಡು ಅಂದ್ರು. ಅವಳು ಮಾತ್ರ ಯಾವುದಕ್ಕೆ ಸಾ ಕ್ಯಾರ್ ಮಾಡ್ಲಿಲ್ಲ. ಅವಳಿಗೆ ಧೈರ್ಯಕ್ಕೆ ಸೇಸಿ ಇದ್ಲು. ಹಾಗಾಗಿ ಗರ್ಭ ತೆಗೆಸಲೂ ಇಲ್ಲ, ಊರು ಬಿಡಲೂ ಇಲ್ಲ. ತಿಂಗಳು ತುಂಬಿ ಹಡೆದ ಗಂಡು ಮಗುವನ್ನು ಎಲ್ಲ ಆರೈಕೆ ಮಾಡಿದ್ದು ಸೇಸಿಯೇ. ನಾರಾಯಣ ಮಗು ಆದ ಮೇಲೆ ಆಗೊಮ್ಮೆ ಈಗೊಮ್ಮೆ ವಸಂತಿ ಇದ್ದಲ್ಲಿಗೆ ಬರ್ತಾ ಇದ್ದ. ಖರ್ಚಿಗೆ ಅಂತ ಅಷ್ಟು ಇಷ್ಟು ಕೊಡ್ತಿದ್ದ. 'ಮಗನನ್ನು ನೋಡಿಯಂತೆ ಒಮ್ಮೆ ಎಷ್ಟು ದೊಡ್ಡದಾಗಿದ್ದಾನೆ ಅಂತ?' ಎಂದು ವಸಂತಿ ಮಗುವನ್ನು ಎದುರಿಗೆ ತಂದು ತೋರಿಸಿದ್ರೆ ಅವ ಕಣ್ಣೆತ್ತಿ ಸಾ ನೋಡ್ತಿರಲಿಲ್ಲ. ಮಾತ್ರ ಅಲ್ಲ, 'ಇದು ನನ್ನ ಮಗು ಅಲ್ಲ! ನೀನು ಹೀಗೆಲ್ಲ ಮಗ ಮಗ ಅಂತ ನನ್ನ ಎದುರು ಹಿಡೀಬೇಡ. ನಂಗೆ ಇದೆಲ್ಲ ಇಷ್ಟ ಆಗೂದಿಲ್ಲ!' ಅಂತ ಕಣ್ಣಿಗೆ ಕೈ ಹಾಕಿದ ಹಾಗೆ ಹೇಳ್ತಿದ್ದ. ಕ್ರಮೇಣ ಬರೂದು ಕಡಮೆ ಮಾಡಿದ. ದುಡ್ಡು ಕಳಿಸುದು ಸಾ ನಿಂತಿತು. ಯೆಂತಕ್ಕೆ ಅಂದ್ರೆ ಅವ ಕುಣೀತಾ ಇದ್ದ ಮೇಳ ಕೈದಾಯಿತು. ಅವನ ನಂತ್ರದ ಯುವಕರು ಒಳ್ಳೆಯ ಸ್ತ್ರೀ ವೇಷದವರು ರೆಡಿಯಾದ್ರು. ಹಾಗಾಗಿ ನಾರಾಯಣನಿಗೆ ಡಿಮ್ಯಾಂಡ್ ಕಮ್ಮಿಯಾಯಿತು. ಎಲ್ಲಿ ಸಾ ಸೆಟ್ ಆಗದೆ ಮೇಳ ಬಿಟ್ಟು ಬೊಂಬಾಯಿಗೆ ಹೋಟೆಲ್ ಕೆಲಸಕ್ಕೆ ಹೋಗಿ ಸೇರಿಕೊಂಡ.

ಹೆತ್ತ ಮಗನನ್ನು ದೊಡ್ಡದು ಮಾಡಲಿಕ್ಕೆ ವಸಂತಿ ಪಟ್ಟ ಬಂಗ ಅಷ್ಟು ಇಷ್ಟಲ್ಲ. ಆಸ್ತಿ ಅಂತ ಗೋವಿಂದ ಭಟ್ರದ್ದು ಅಂಥದ್ದೇನೂ ಇರ್ಲಿಲ್ಲ. ಅವಳಿಗೆ ಸೀರೆಗೆ ಫಾಲ್ಸ್ ಹಚ್ಚುದು, ಬ್ಲೌಸ್ ಹೊಲಿಯುದು, ಕಸೂತಿ ಎಲ್ಲ ಬರ್ತಿತ್ತು. ಪೇಟೆಗೆ ಹೋಗಿ ಅದರ ಮೂಲಕ ಸಂಪಾದನೆ ಮಾಡ್ಲಿಕ್ಕೆ ಸುರು ಮಾಡಿದ್ಲು. ಸುರು ಸುರೂವಲ್ಲಿ ಅಂಥದ್ದೇನೂ ಕೈ ಹಿಡೀಲಿಲ್ಲ. ಅಮೇಲೆ ಅಡ್ಡಿಯಿಲ್ಲ ಬದುಕಬಹುದು ಅಂತ ಅನಿಸುವ ಹಾಗೆ ಸಂಪಾದನೆ ಆಗತೊಡಗಿತು. ಮಗ ಬೆಳೀತಾ ಇದ್ದ ಹಾಗೆ ಪ್ರಶ್ನೆ ಕೇಳ್ಲಿಕ್ಕೆ ಸುರು ಮಾಡಿದ.

'ಅಪ್ಪ ಯಾರಮ್ಮಾ? ಎಲ್ಲಿ ಇದ್ದಾರಮ್ಮಾ? ಯಾವಾಗ ಬರ್ತಾರಮ್ಮ?' ಇವೇ ಪ್ರಶ್ನೆಗಳು. ಎಂಥೆಂಥದೋ ಹೇಳಿ ಮಗ ನಂಬುವ ಹಾಗೆ ಮಾಡ್ತಿದ್ದಳು. ಶಾಲೆಗೆ ಸೇರಿಸುವಾಗ ಅಪ್ಪನ ಹೆಸರಿನ ಕಾಲಮಿನಲ್ಲಿ ನಾರಾಯಣನ ಹೆಸರನ್ನು ನಮೂದಿಸಿದ್ದಳು.

ಪೇಪರಿನಲ್ಲಿ ಒಮ್ಮೆ ಮಳೆಗಾಲದ ಆಟದಲ್ಲಿ ಅತಿಥಿ ಕಲಾವಿದನಾಗಿ ನಾರಾಯಣ ಬೊಂಬಾಯಿಯಲ್ಲಿ ವೇಷ ಹಾಕ್ತಾನೆ ಅಂತ ಅವಳ ಕಣ್ಣಿಗೆ ಬಿದ್ದಿತ್ತು. ಯಾರ ಹತ್ರವೋ ದಮ್ಮಯ್ಯ ಹಾಕಿ ಅವನ ನಂಬರನ್ನು ತಕ್ಕೊಂಡಿದ್ದಳು. ಸುರುಸುರೂವಿಗೆ ಮಾತಾಡುವಾಗ ಯಾರಾ ಗೊತ್ತೇ ಇಲ್ಲ ಅನ್ನುವ ಹಾಗೆ ಮಾಡಿದ. ಕಡೆಗೆ ಒಂದಿಷ್ಟು ಮಾತಾಡಿದ. 'ವಸಂತೀ... ಇತ್ತಿತ್ತಾಗೆ ನಂಗೆ ಈ ಗಂಡ ಹೆಂಡತಿ ಮಗ ಸಂಬಂಧಗಳು ಎಲ್ಲ ಸುಳ್ಳು ಅನಿಸ್ಲಿಕ್ಕೆ ಸುರುವಾಗಿದೆ. ಈಗ ಯಾರು ಸಾ ಬೇಡ ಅನ್ನಿಸ್ತದೆ. ಇಲ್ಲಿ ಒಂದು ಹೋಟ್ಲಲ್ಲಿ ಕೆಲಸ ಮಾಡ್ತಾ ಇದ್ದೇನೆ. ಕೆಲವು ಸರ್ತಿ ಇಲ್ಲಿ ನಡೆಯುವ ಆಟದಲ್ಲಿ ವೇಷ ಹಾಕ್ತೇನೆ. ನಾಕು ಕಾಸು ಬರ್ತದೆ. ಮತ್ತೆ ಮೈಗೆ ಬೇಕಾದ್ರೆ ಜನ ಸಿಗ್ತಾರೆ. ಹಾಗಾಗಿ ನಂಗೆ ಯಾರೂ ಬೇಡ' ಅಂತ ವೈರಾಗ್ಯದ, ಉಡಾಫೆಯ ಮಾತಾಡಿದ್ದ. 'ಹಾಗೆಲ್ಲ ಹೇಳಬೇಡಿ. ನಂಗೆ ನೀವು ಬೇಕು. ಮಗ ಮುಂದಿನ ವರ್ಷ ಕಾಲೇಜಿಗೆ ಹೋಗ್ತಾನೆ. ಇಷ್ಟು ವರ್ಷ ನೀವು ಹೇಳಿದ ಹಾಗೆ ಮಗನಿಗೆ ನೀವು ಅಪ್ಪ ಅನ್ನುದು ಗೊತ್ತಾಗದ ಹಾಗೆ ನಡೆಸಿದೆ. ಇನ್ನು ಮುಂದಾದರೂ ಒಮ್ಮೆ ಬಂದು ಹೋಗಿ. ನಂಗೆ ನೀವು ಬೇಕು. ಮತ್ತೆ ಎಂಥದೂ ಬೇಡ' ಅಂತ ಅಂದಿದ್ದಳು. ಆಗ ಟಕ್ ಅಂತ ಫೋನ್ ಕಟ್ ಮಾಡಿದ್ದ. ಆಮೇಲೆ ಅವಳು ಎಷ್ಟು ಸರ್ತಿ ಫೋನ್ ಮಾಡಿದ್ರೂ ನಂಬರ್ ಬ್ಲಾಕ್ ಮಾಡ್ತಿದ್ದ. ಹೀಗಾಗಿ ಎರಡು ವರ್ಷಗಳ ಹಿಂದಿನಿಂದಲೂ ಅವನ ಸಂಪರ್ಕ ಇರ್ಲಿಲ್ಲ. ಈಗ ಅಚಾನಕ್ಕಾಗಿ ಊರಿಗೆ ಬರ್ತಾ ಇದ್ದಾರೆ! ಅದೂ ಇವತ್ತೇ! ಒಳಗೆ ಅಡುಗೆ ಮನೆಯಲ್ಲಿ ಠಣ್ ಅಂತ ಸೌಂಡಾಯಿತು. ವಸಂತಿ ವಾಸ್ತವಕ್ಕೆ ಬಂದಳು. ಎದ್ದು ಒಳಗೆ ಓಡಿದಳು. ಕರಿಬೆಕ್ಕೊಂದು ಅಡಿಗೆ ಮನೆಗೆ ಕದ್ದು ಹಾಲು ಕುಡೀಲಿಕ್ಕೆ ಬಂದಿತ್ತು. ಹಚಾ ಅಂತ ಓಡಿಸಿದಳು.

ದೇವಸ್ಥಾನದ ಪುರುಷೋತ್ತಮ ಭಟ್ರಿಗೆ ಫೋನು ಮಾಡಿ ಇವತ್ತು ದೇವಸ್ಥಾನದಲ್ಲಿ ತನ್ನ ಲೆಕ್ಕದಲ್ಲಿ ಹೂವಿನ ಪೂಜೆ ಮಾಡಿಸಲು ಹೇಳಿದಳು. ಮಾತ್ರ ಅಲ್ಲ, 'ಇವತ್ತು ಸಂಜೆ ನನ್ನ ಮನೆಯಲ್ಲಿ ದುರ್ಗಾ ನಮಸ್ಕಾರ ಮಾಡ್ಲಿಕ್ಕೆ ಆಗ್ತದಾ? ಮಗನ ಉದ್ದೇಶಕ್ಕೆ ಹೇಳಿಕೊಂಡಿದ್ದೆ' ಅಂತ ಕೇಳಿದಳು.